**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಮಿಸ್ 109/2023**

**ಪಿ ಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಚಿತ್ರಾ ಅಲಿಯಾಸ ಲಕ್ಷ್ಮೀ |
| ಗಂಡನ ಹೆಸರು | - | ರಕ್ಷಿತ್ |
| ವಯಸ್ಸು | - | 20 ವರ್ಷ |
| ಕೆಲಸ | - | ಗೃಹಿಣಿ |
| ವಾಸ | - | ಹರೀನಹಳ್ಳಿ |

**ದಿನಾಂಕ 19-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆ ಶ್ರೀಮತಿ ಜಿ ಎಸ್ ಜೆ ಅರ್ಜಿದಾರರ ಪರ ವಕೀಲರುಃ**

ನನ್ನ ಹಾಗೂ ಎದುರುದಾರರ ಮದುವೆಯೂ ದಿ 04-06-2021 ರಂದು ಶ್ರೀ ಬಸವೇಶ್ವರ ಸಮುದಾಯ ಭವನ ಹರೀನಹಳ್ಳಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ನೇರವೇರಿರುತ್ತದೆ. ಮದುವೆಯ ಸಮಯದಲ್ಲಿ ನಮ್ಮ ತಾಯಿ ವರದಕ್ಷಿಣೆಯಾಗಿ ನನ್ನ ಗಂಡನಿಗೆ 100 ಗ್ರಾಂ ಚಿನ್ನ 2 ಲಕ್ಷ ನಗದು ಹಣವನ್ನು ನೀಡಿರುತ್ತಾರೆ. ಮದುವೆಯಾದ ನಂತರ ನಾನು ಮತ್ತು ಎದುರುದಾರ ಜೊತೆಗೆ ಹೆಬ್ಸೂರು ಗ್ರಾಮದಲ್ಲಿ ನನ್ನ ವೈವಾಹಿಕ ಜೀವನವನ್ನು ಪ್ರಾರಂಭಿಸಿದ್ದು, ಮದುವೆಯಾದ ನಂತರ 4 ತಿಂಗಳುಗಳ ಕಾಲ ಎದುರುದಾರರ ಜೂತೆಗೆ ಅನೋನ್ಯವಾಗಿ ಸಂಸಾರಿಕ ಜೀವನವನ್ನು ನಡೆಸಿರುತ್ತೇನೆ.

2. ನಂತರ ಎದುರುದಾರರು ಪ್ರತಿದಿನ ಕುಡುದುಕೊಂಡು ಬಂದು ಹೊಡೆಯುವುದು, ನಮ್ಮ ತಾಯಿಯ ಮನೆಗೆ ಹೋಗಿ ಚಿನ್ನ ಮತ್ತು ಹಣವನ್ನು ತೆಗೆದುಕೊಂಡು ಬಾ ಎಂದು, ಅದೇ ರೀತಿ ಜಮೀನನ್ನು ಬರೆಸಿಕೊಂಡು ಬಾ ಎಂದು ನನಗೆ ಚಿತ್ರಹಿಂಸೆಯನ್ನು ಕೊಡುತ್ತಿದ್ದರು. ಎದುರುದಾರರು ನನಗೆ ಎಷ್ಟೇ ಹಿಂಸೆ ಕೊಟ್ಟರು ಸಹ ಮತ್ತು ಹಲ್ಲೆ ಮಾಡಿದರು ಸಹ ನಮ್ಮ ತಾಯಿ ಒಬ್ಬಳೇ ಇದ್ದು ಅವಳು ನೊಂದುಕೊಳ್ಳುತ್ತಾಳೆ ಎಂದು ನಾನು ಸದರಿ ವಿಚಾರವನ್ನು

ನಮ್ಮ ತಾಯಿಗೆ ತಿಳಿಸುತ್ತಿರಲಿಲ್ಲ. ನಮ್ಮ ತಾಯಿಗೆ ಯಾವುದೇ ಜಮೀನು ಇಲ್ಲದೆ ಕೇವಲ 10 ಗುಂಟೆ ಜಮೀನು ಅವರ ಜೀವನಕ್ಕೆ ಇದ್ದು ಅದನ್ನು ಮಾರಿ ಹಣವನ್ನು ತೆಗೆದುಕೊಂಡು ಬಾ ಎಂದು ನಾನು ಹೋಗದೆ ಇದ್ದರೆ ಆ್ಯಸಿಡ್ ಮತ್ತು ಪೆಟ್ರೋಲ್ ನ್ನು ಹಾಕಿ ಸಾಯಿಸುವುದಾಗಿ ನನ್ನನ್ನು ಹೆದರಿಸಿ ನಮ್ಮ ತಾಯಿಯ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ.

3. ನಂತರ ನಮ್ಮ ತಾಯಿ ನಮ್ಮ ಸಂಬಂಧಿಕರೊಂದಿಗೆ ನನ್ನ ಗಂಡನ ಮನೆಗೆ ಬಂದು ಗ್ರಾಮಸ್ಥರೆಲ್ಲ ಸೇರಿ ಮಾತುಕತೆ ಮಾಡಿ ಬುದ್ಧಿ ಮಾತು ಹೇಳಿರುತ್ತಾರೆ. ಎದುರುದಾರರು ಇನ್ನು ಮುಂದೆ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ತಿಳಿಸಿರುತ್ತಾರೆ. ನಾನು ನಮ್ಮ ಗಂಡನ ಮನೆಯಲ್ಲಿಯೇ ಇದ್ದು 2-3 ದಿನಗಳ ನಂತರ ನಮ್ಮ ತಾಯಿ ಹೋದ ಮೇಲೆ ಪುನಃ ಒಡವೆ ಮತ್ತು ಹಣವನ್ನು ತೆಗೆದುಕೊಂಡು ಬಾ ಎಂದು ನನಗೆ ಹೊಡೆಯಲು ಪ್ರಾರಂಭಿಸಿರುತ್ತಾರೆ. ನಂತರ ನಾನು ಎದುರುದಾರರು ಗಲಾಟೆ ಮಾಡಿದಾಗ ನಾನು ಒಬ್ಬಳೇ ನಮ್ಮ ತಾಯಿಯ ಮನೆಗೆ ಹೋಗಿರುತ್ತೇನೆ. ಅಲ್ಲಿಂದ ಇಲ್ಲಿಯವರೆಗೆ ನಾನು ನಮ್ಮ ತಾಯಿಯ ಮನೆಯಲ್ಲಿಯೇ ಇರುತ್ತೇನೆ.

ನಾನು ನಮ್ಮ ತಾಯಿಯ ಮನೆಗೆ ಬಂದಾಗಿನಿಂದ ಎದುರುದಾರರು ನನಗೆ ಯಾವುದೇ ರೀತಿ ಮಾತನಾಡಿಸುವುದಾಗಲಿ ಅವರ ಮನೆಗೆ ಕರೆಯುವುದಾಗಲಿ ಮಾಡುವುದಿಲ್ಲ. ಎದುರುದಾರರು ನಮ್ಮ ಮನೆಯ ಮುಂದೆಯೇ ಓಡಾಡುತ್ತಾರೆ ಆದರೆ ನನ್ನ ಗಂಡ ಯಾವತ್ತೂ ಸಹ ನನ್ನ ಬಗ್ಗೆ ವಿಚಾರಿಸಿರುವುದಿಲ್ಲ. ನಮ್ಮ ತಾಯಿ ಹೋಗಿ ಎದುರುದಾರರ ಬಳಿ ಕೇಳಿದಾಗ ನನ್ನನ್ನು ಕರೆದುಕೊಂಡು ಹೋಗುವಂತೆ ಕೇಳಿದಾಗ ಕರೆದುಕೊಂಡು ಹೋಗುವುದಿಲ್ಲ ಎಂದು ವಿಚ್ಛೇದವನ್ನು ನೀಡುವುದಾಗಿ ತಿಳಿಸಿರುತ್ತಾರೆ. ನಾನು ಪ್ರಸ್ತುತ ನಮ್ಮ ತಾಯಿಯ ಮನೆಯಲ್ಲಿಯೇ ಇದ್ದು ಯಾವುದೇ ಕೆಲಸವನ್ನು ಮಾಡುತ್ತಿರುವುದಿಲ್ಲ. ನಮ್ಮ ತಾಯಿಗೆ ವಯಸ್ಸಾಗಿದ್ದು ಅದೇ ರೀತೀ ನಮ್ಮ ತಾಯಿಯ ಜೊತೆ ನಮ್ಮ ಜೊತೆ ವಯಸ್ಸಾದ ಅಜ್ಜಿ ಸಹ ಇದ್ದು ನಮ್ಮ ತಾಯಿಗೆ ನಮ್ಮನ್ನು ನೋಡಿಕೊಳ್ಳಲು ಕಷ್ಟ ವಾಗಿರುತ್ತದೆ.

ಎದುರುದಾರಾದ ನನ್ನ ಗಂಡ ಜಲ್ಲಿಯ ಕ್ರಶರ್ ಕಾರ್ಖಾನೆಯಲ್ಲಿ ಕೆಲಸವನ್ನು ಮಾಡುತ್ತಿದ್ದು ತಿಂಗಳಿಗೆ 25-30 ಸಾವಿರ ಹಣವನ್ನು ಸಂಪಾದಿಸುತ್ತಾರೆ. ಅದೇ ರೀತೀ ಎದುರುದಾರ ತಂದೆ ನಮ್ಮ ಮಾವನ ಹೆಸರಿನಲ್ಲಿ 2 ಎಕರೆ ಜಮೀನು ಇರುತ್ತದೆ. ಸದರಿ

ಜಮೀನಿನಲ್ಲಿ ಎದುರುದಾರು ಹೋಗೆಸೂಪ್ಪನ್ನು ಬೆಳೆಯುತ್ತಿದ್ದು ಸದರಿ ಜಮೀನಿನಿಂದ ವಾರ್ಷಿಕವಾಗಿ 5 -6 ಲಕ್ಷ ಆದಾಯ ಬರುತ್ತದೆ. ನಾನು ಯಾವುದೇ ಕೆಲಸವನ್ನು ಮಾಡದ ಕಾರಣ ನನಗೆ ಜೀವನ ನಡೆಸಲು ಕಷ್ಟ ವಾಗಿದ್ದು ಎದುರುದಾರರ ಕಡೆಯಿಂದ ನನಗೆ ನನ್ನ ಜೀವನ ನಿರ್ವಹಣೆಗೆ ಪ್ರತಿ ತಿಂಗಳು 15 ಸಾವಿರ ಹಣವನ್ನು ಜೀವನಾಂಶದ ರೂಪದಲ್ಲಿ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಸಾಕ್ಷಿ ಒಂದು ಮದುವೆಯ ಆಮಂತ್ರಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಅರ್ಜಿದಾರರು ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ